


# ದೇವದತ್ತ ಆಟಕ್ಕೆ ತಕ್ಕ ಫಲ ಸಿಗುತ್ತಾ?

■ ಗಿರೀಶ ದೊಡ್ಡಮನಿ

ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯು ಈ ಬಾರಿ ಸದ್ದು ಮಾಡಿದಷ್ಟು ಹಿಂದೆಂದೂ ಮಾಡಿಲ್ಲ. ಟೂರ್ನಿಯ ಮೊದಲ ಸುತ್ತಿನಲ್ಲಿಯೇ ದಾಖಲೆಗಳು ಸಾಲುಗಟ್ಟಿದವು. ರನ್‌ಗಳು ಹೊಳೆಯಂತೆ ಹರಿದವು. 22 ಶತಕಗಳು ದಾಖಲಾದವು. ತಂಡಗಳು ದೊಡ್ಡ ಮೊತ್ತ ಗಳಿಕೆಯ ದಾಖಲೆ ಮಾಡಿದವು. ಇದೆಲ್ಲದರ ಕೇಂದ್ರಬಿಂದುವಾಗಿದ್ದು ಕರ್ನಾಟಕ. ಏಕೆಂದರೆ; ದಾಖಲೆಯ ಮೊತ್ತವನ್ನು ಬೆನ್ನಟ್ಟಿ ಗೆದ್ದಿತು.

ಎ ಗುಂಪಿನ ಪಂದ್ಯದಲ್ಲಿ ಜಾರ್ಖಂಡ್ ತಂಡವು 413 ರನ್‌ಗಳ ಗುರಿಯೊಡ್ಡಿತ್ತು. ಕರ್ನಾಟಕಕ್ಕೆ ಇದನ್ನು ಮೀರಲು ಸಾಧ್ಯವೇ ಎಂಬ ಗುಮಾನಿ ಮೂಡಿತ್ತು. ಏಕೆಂದರೆ; ಈಚೆಗಷ್ಟೇ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಕರ್ನಾಟಕವು ನಿರಾಶಾದಾಯಕ ಪ್ರದರ್ಶನ ನೀಡಿತ್ತು. ಆದರೆ ಹಾಗಾಗಲಿಲ್ಲ. ಬೆಟ್ಟದಂತಹ ಮೊತ್ತ ಮಂಜಿನಂತೆ ಕರಗಿತು. ಅದಕ್ಕೆ ಪ್ರಮುಖ ಕಾರಣವಾಗಿದ್ದು ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್. 118 ಎಸೆತಗಳಲ್ಲಿ 147 ರನ್ ಗಳಿಸಿದ ದೇವದತ್ತ ಆಟಕ್ಕೆ ಇಶಾನ್ ಕಿಶನ್ ನಾಯಕತ್ವದ ಜಾರ್ಖಂಡ್ ತಂಡವು ಬೆಚ್ಚಿಬೆರಗಾಯಿತು. ಅದರಲ್ಲಿ ಏಳು ಭರ್ಜರಿ ಸಿಕ್ಸರ್‌ಗಳಿದ್ದವು. ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅವತ್ತು 'ಕೂಲ್ ಬಾಯ್' ಖ್ಯಾತಿಯ ದೇವದತ್ತ ಅಬ್ಬರ ಮೇರೆ ಮೀರಿತ್ತು.

ಸದ್ಯ ಕ್ರಿಕೆಟ್ ಮೂರು ಮಾದರಿಗಳಲ್ಲಿಯೂ ಅಗ್ರಕ್ರಮಾಂಕದಲ್ಲಿ ರನ್ ಸೂರೆ ಮಾಡಬಲ್ಲ ಕೆಲವೇ ಪ್ರತಿಭಾನ್ವಿತ ಎಡಗೈ ಬ್ಯಾಟರ್‌ಗಳಲ್ಲಿ ದೇವದತ್ತ ಇದ್ದಾರೆ. ಆದರೂ ಅವರಿಗೆ ಭಾರತ ತಂಡದಲ್ಲಿ ಸಿಗಬೇಕಾದ ಅವಕಾಶಗಳು ಇನ್ನೂ ಒಲಿದುಬಂದಿಲ್ಲ. 2018ರಲ್ಲಿ ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿದ ದೇವದತ್ತ ದೇಶಿ ಕ್ರಿಕೆಟ್ ಅಷ್ಟೇ ಅಲ್ಲ; ಐಪಿಎಲ್‌ನಲ್ಲಿಯೂ ಭರ್ಜರಿ ಆಟವಾಡಿದ್ದಾರೆ. ಆದರೆ ಕಳೆದ ಏಳು ವರ್ಷಗಳಲ್ಲಿ ಅವರಿಗೆ ಎರಡು ಟೆಸ್ಟ್ ಮತ್ತು ಎರಡು ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡುವ ಅವಕಾಶ ಮಾತ್ರ ಲಭಿಸಿದೆ. ಈ ಋತುವಿನಲ್ಲಿಯಂತೂ ಅವರ ಆಟ ಮತ್ತಷ್ಟು ರಂಗೇರಿದೆ.

ಪ್ರಸ್ತುತ ನಡೆಯುತ್ತಿರುವ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ನಾಲ್ಕು ಪಂದ್ಯಗಳಿಂದ ಮೂರು ಶತಕಗಳನ್ನು ಹೊಡೆದಿದ್ದಾರೆ. ಈ ಬಾರಿ ಅವರು ಮಯಂಕ್ ಅಗರವಾಲ್ ಜೊತೆಗೆ ಇನಿಂಗ್ಸ್ ಆರಂಭಿಸುತ್ತಿದ್ದು, ಹೊಸ ಚೆಂಡು ಎದುರಿಸುವ ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಿದ್ದಾರೆ. ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿಯೂ ಅವರ ಬ್ಯಾಟಿಂಗ್ ಉತ್ತಮವಾಗಿತ್ತು. ಆರು ಪಂದ್ಯಗಳಿಂದ 309 ರನ್ ಪೇರಿಸಿದ್ದರು. ಅದರಲ್ಲಿ ಎರಡು ಅರ್ಧಶತಕ ಮತ್ತು ಒಂದು ಶತಕ ಕೂಡ ಸೇರಿದೆ.

ಈ ಋತುವಿನ ರಣಜಿ ಟ್ರೋಫಿಯ ಮೊದಲ ಸುತ್ತಿನಲ್ಲಿಯೂ ದೇವದತ್ತ ಸೌರಾಷ್ಟ್ರ ಎದುರಿನ ಪಂದ್ಯದಲ್ಲಿ ಕೇವಲ ನಾಲ್ಕು ರನ್ ಅಂತರದಿಂದ ಶತಕ ಕೈತಪ್ಪಿಸಿಕೊಂಡಿದ್ದರು. ಆದರೆ ಅವರ 96 ರನ್‌ಗಳ ಇನಿಂಗ್ಸ್ ಉತ್ಕೃಷ್ಟ ದರ್ಜೆಯದ್ದಾಗಿತ್ತು. ಆ ಪಂದ್ಯದಲ್ಲಿ ಕರ್ನಾಟಕ ಡ್ರಾ ಮಾಡಿಕೊಂಡಿತ್ತು. ಈ ಟೂರ್ನಿಯಲ್ಲಿ ಅವರು ಮೂರನೇ ಕ್ರಮಾಂಕದಲ್ಲಿ ಆಡಿದ್ದರು. ಆದರೆ ಸೀಮಿತ ಓವರ್‌ಗಳ ಮಾದರಿಯಲ್ಲಿ ಆರಂಭಿಕ ಬ್ಯಾಟರ್ ಕೊರತೆಯನ್ನು ನೀಗುವಲ್ಲಿ ತಂಡಕ್ಕೆ ನೆರವಾಗಿದ್ದಾರೆ.

